**ರಾಜ್ಯದಲ್ಲಿ ಅತಿವೃಷ್ಟಿ / ಪ್ರವಾಹದಿಂದ ಹಾನಿಯಾಗುವ ಮನೆಗಳ ಪುನರ್ ನಿರ್ಮಾಣ, ದುರಸ್ಥಿ ಕಾರ್ಯ ಹಾಗೂ ಸಂತ್ರಸ್ತರಿಗೆ ಪರಿಹಾರವನ್ನು ಪಾವತಿಸಲು ಸರ್ಕಾರದ ಆದೇಶದಂತೆ, 2025-26ನೇ ಸಾಲಿನಲ್ಲಿ ಶೇ 50-75 ಮನೆ ಹಾನಿಗಳಿಗೆ ರೂ. 50 ಸಾವಿರ, ಶೇ 75 ಕ್ಕಿಂತ ಹೆಚ್ಚು ಮನೆ ಹಾನಿಗಳಿಗೆ ರೂ. 1.20 ಲಕ್ಷ ಮಾತ್ರ ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಪರಿಹಾರ ಮೊತ್ತವನ್ನು ಕಡಿತ ಮಾಡಿದ ಕಾರಣ ಸದರಿ ಪರಿಹಾರ ತೀರಾ ಕಡಿಮೆಯಾಗಿ ಸಂತ್ರಸ್ತರಿಗೆ ತೊಂದರೆಯಾಗಿದ್ದು, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಸದರಿ ಪರಿಹಾರದಿಂದ ತುರ್ತಾಗಿ ಮನೆ ನಿರ್ಮಿಸುವುದು ಕಷ್ಟಸಾಧ್ಯವಾಗಿರುವ ಕಾರಣ ಪರಿಹಾರ ಮೊತ್ತವನ್ನು ಹೆಚ್ಚಿಸುವ ಬಗ್ಗೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ ರವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಉತ್ತರ:**

ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ನೀಡಬಹುದಾದ ಪರಿಹಾರದ ಬಗ್ಗೆ ಭಾರತ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ:11.07.2023 ರಂದು ಹೊರಡಿಸಿರುವ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ / ರಾಜ್ಯ ವಿಪತ್ತು ಪರಿಹಾರ ನಿಧಿಯ Revised Items and Norms of Assistance ಮಾರ್ಗಸೂಚಿಗಳನ್ವಯ ಅತಿವೃಷ್ಟಿ / ಅನಾವೃಷ್ಟಿಯಿಂದ ಉಂಟಾದ ಮನೆಹಾನಿಗೆ ಕೆಳಕಂಡಂತೆ ಪರಿಹಾರವನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

| | | |
|---|---|---|
| B | **Recovery & Reconstruction: (30% Of SDRMF i.e. equal to 37.50% of SDRF allocation for the year)** | |
| 10 | **Housing** | |
| | **Fully damaged / destroyed houses and severely damaged houses** | |
| | iii) Pucca House | Rs.1,20,000/- per house, in plain areas. |
| | iv) Kutcha House | Rs.1,30,000/- per house, in hilly areas. |
| | **Partially Damaged Houses (Other than huts) where the damage is at least 15 %** | |
| | iii) Pucca House | Rs.6,500/- per house. |
| | iv) Kutcha House | Rs. 4,000/- per house. |
| | **c) Damaged / destroyed huts:** | Rs. 8,000/- per hut. (Hut means temporary, make shift unit, inferior to Kutcha house, made of thatch, mud, plastic, sheets etc. traditionally recognized at hut by the State / District authorities). Note: The damaged house / hut should be an authorized construction, duly certified by the Competent Authority of the State Government. |
| | **d) Cattle Shed attached with house** | Rs. 3,000/- per shed. |

ಭಾರತ ಸರ್ಕಾರದ ಗೃಹ ಮಂತ್ರಾಲಯದ ದಿನಾಂಕ:11.07.2023 ರ ಮಾರ್ಗಸೂಚಿಯಲ್ಲಿ ಮನೆ ಹಾನಿಗೆ ನಿಗಧಿಪಡಿಸಿರುವ ಪರಿಹಾರ ಮೊತ್ತದ ಜೊತೆಗೆ, 2024-25 ಮತ್ತು 2025-26 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಕೆಳಕಂಡಂತೆ ಹೆಚ್ಚುವರಿ ಪರಿಹಾರ ಮೊತ್ತವನ್ನು ಅರ್ಹತೆಯಾನುಸಾರ ಪಾವತಿಸಲಾಗುತ್ತಿದೆ:-

| **ಕ್ರ. ಸಂ.** | **ಮನೆ ಹಾನಿಯ ಪ್ರಮಾಣ** | **ವಿವರಣೆ** | **ದಿನಾಂಕ:11.07.2023 ರ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಮೊತ್ತ** | **ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ನಿಗದಿಪಡಿಸಿರುವ ಮೊತ್ತ** |
|---|---|---|---|---|
| 1 | ಪೂರ್ಣ ಮನೆ ಹಾನಿ | ಸಂಪೂರ್ಣ ಹಾಗೂ ಮನೆಯ ಗೋಡೆಗಳೊಂದಿಗೆ ಮೇಲ್ಛಾವಣಿ ಕುಸಿತ (Walls and roof collapse) (ಶೇ.75% ಕ್ಕಿಂತ ಹೆಚ್ಚು) ಮನೆ ಹಾನಿ. | ರೂ.1,20,000/- | ವಸತಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ದೇವರಾಜ್ ಅರಸು ವಸತಿ ಯೋಜನೆಯಡಿ ಮನೆ ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಾಮಾನ್ಯ |

.....2

| | | | | |
|---|---|---|---|---|
| | | | | ವರ್ಗಗಳಿಗೆ ಮಂಜೂರು ಮಾಡುವ ಮನೆಗೆ ರೂ.1,20,000/- ಲಕ್ಷ ಮತ್ತು ಎಸ್.ಸಿ/ಎಸ್.ಟಿ ವರ್ಗಗಳಿಗೆ ಮಂಜೂರು ಮಾಡುವ ಮನೆಗೆ ರೂ.1,50,000/- ಲಕ್ಷ ಮಂಜೂರು ಮಾಡಲಾಗುತ್ತಿದೆ. |
| 2 | ಅತೀ ಸಣ್ಣ ಪ್ರಮಾಣದ ಮನೆ ಹಾನಿ (ಶೇ.15% ಕ್ಕಿಂತ ಮೇಲ್ಪಟ್ಟು ಹಾಗೂ ಶೇ.20% ಕ್ಕಿಂತ ಕಡಿಮೆ) | ಮನೆಯ ಮೇಲ್ಛಾವಣಿಯ ಹಂಚು/ಶೀಟುಗಳ, ಬಾಗಿಲು & ಕಿಟಕಿಗಳ ಹಾನಿ ಹಾಗೂ ಇನ್ನಿತರೆ ಸಣ್ಣ ಪುಟ್ಟ ಹಾನಿ. | ರೂ.6,500/- | - |
| 3 | ಮಧ್ಯಮ ಪ್ರಮಾಣದ ಮನೆ ಹಾನಿ (ಶೇ.20% ಕ್ಕಿಂತ ಮೇಲ್ಪಟ್ಟು ಹಾಗೂ ಶೇ.50% ಕ್ಕಿಂತ ಕಡಿಮೆ) | ಮನೆಯ ಗೋಡೆಗಳಲ್ಲಿ ಬಿರುಕು / ಸಣ್ಣ ಪ್ರಮಾಣದ ಕುಸಿತ/ ಹಾನಿ ಹಾಗೂ ಇನ್ನಿತರೆ ಹೆಚ್ಚಿನ ಪ್ರಮಾಣದ ಹಾನಿ (Repair and Patchup Work of Walls) | ರೂ.6,500/- | ರೂ.23,500/- |
| 4 | ಹೆಚ್ಚು ಪ್ರಮಾಣದ ಮನೆ ಹಾನಿ (ಶೇ.50% ಕ್ಕಿಂತ ಮೇಲ್ಪಟ್ಟು ಹಾಗೂ ಶೇ.75% ಕ್ಕಿಂತ ಕಡಿಮೆ) | ಮನೆಯ ಗೋಡೆಗಳ ಕುಸಿತ ಹಾಗೂ ಮೇಲ್ಛಾವಣಿಯ ಹಾನಿ (Reconstruction of walls and repair of roofs). | ರೂ.6,500/- | ರೂ.43,500/- |

ಅನಧಿಕೃತ ಜಮೀನಿನಲ್ಲಿ ಸಂಪೂರ್ಣ ಹಾನಿಗೊಳಗಾದ ಮನೆಗಳಿಗೆ ಒಂದು ಬಾರಿ ಪರಿಹಾರವಾಗಿ ರೂ.1,00,000/- ಲಕ್ಷಗಳನ್ನು ಪಾವತಿಸಲಾಗುತ್ತಿದೆ.

ಭಾರತ ಸರ್ಕಾರದ ಗೃಹ ಮಂತ್ರಾಲಯದ ದಿನಾಂಕ:11.07.2023 ರ ಮಾರ್ಗಸೂಚಿಯಲ್ಲಿ ಮನೆ ಹಾನಿಗೆ ನಿಗಧಿಪಡಿಸಿರುವ ಪರಿಹಾರ ಮೊತ್ತದ ಜೊತೆಗೆ, ರಾಜ್ಯ ಸರ್ಕಾರದಿಂದ ಹೆಚ್ಚುವರಿ ಪರಿಹಾರ ಮೊತ್ತವನ್ನು ಪಾವತಿಸಲು ಈಗಾಗಲೇ ಅನುಮೋದನೆಯನ್ನು ನೀಡಲಾಗಿರುತ್ತದೆ.

**ಕಡತ ಸಂಖ್ಯೆ:** ಕಂಇ 344 ಟಿಎನ್ಆರ್ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು